# ಸಾವಿನ ಸದ್ದು

ರಾತ್ರಿಯಿಡೀ ಊಳಿಡುವ ನಾಯಿಗೆ
ಅಜ್ಜಿ ಕಲ್ಲು ತೂರಿದಳು ಬೇಸತ್ತು
ಹಾಕಿದಳು ಹಿಡಿಶಾಪ – 'ನೀನು ಸಾಯಿ'
ನಿಲ್ಲಲೇ ಇಲ್ಲ ಕರ್ಕಶ ಬೊಗಳು
ಅಜ್ಜಿ ಎದ್ದು ಕೂತಳು ಕಿರಿಕಿರಿ ತಾಳದೆ.
ಮಗ್ಗಲು ಬದಲಿಸಿದಳು




ಯಾರಿಲ್ಲದ ಮನೆಯಲ್ಲಿ
ಕೇಳುವರು ಯಾರು
ಮುದುಕಿಯ ಗೋಳ?

ಕಟ್ಟಾಣಿ ಹುಡುಕಿ
ಎಲೆ ಅಡಿಕೆ ಸುಣ್ಣ ಕಲಸಿ
ಚೆನ್ನಾಗಿ ಕುಟ್ಟಿ
ಬಾಯಿಗಿಟ್ಟಳು.
ನಾಯಿ ಬಾಯಿ ನಿಲ್ಲಲಿಲ್ಲ.
ಕಲ್ಲು ತೂರಿದಳು
ಕುಸಿದು ಕೂತರೂ
ಕೇಳುವರಿಲ್ಲ ಇವಳ

ನಸುಕು ಹರಿದು
ಬೆಳಕು ಮೂಡಿತು
ಅಜ್ಜಿಗೆ ಕೆಂಪು ಕಣ್ಣು
ಬದುಕು ಬೇಸರ
ದೂರದಲ್ಲಿ ಅದೇ ನಾಯಿ
ಬಾಲ ಅಲ್ಲಾಡಿಸಿತು
ಅಜ್ಜಿ ಕನಿಕರದಿಂದ
ಅದರ ಬಳಿಗೆ ಸಾಗಿ
ಮೈಸವರಿ ಅಂದಳು,
'ಬೊಗಳದಿರು ರಾತ್ರಿ...'
ತಲೆಯಾಡಿಸಿತು ಹಗಲ ಗೆಳೆಯ

ರಾತ್ರಿ ಅಜ್ಜಿ ಮಲಗಿದಳು
ನಾಯಿ ಕೂಗು ಅವಳಿಗೆ ಕೇಳಲಿಲ್ಲ
ಕಂಡವರು ಗಾಬರಿಗೊಂಡರು
ತಣ್ಣನೆ ದೇಹ ಕಂಡು
ನಾಯಿ ಬೊಗಳುತ್ತಲೇ ಇತ್ತು.

● ಪ. ಚಂದ್ರಕುಮಾರ